MYSORE LEGISLATIVE ASSEMBLY DEBATES.

THIRTY-FIRST DAY.

Friday, the 1st April 1955.

The House met in the Assembly Hall, Old Public Offices, Bangalore, at 30 minutes past Eight of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS

Amildari lists since 1952.

Q.—495. Sri J. NARAYANAPPA (Chintamani—Scheduled Castes).—

Will the Government be pleased to state :—

(*a*) whether they have given the representation of 16 2/3 per cent due to the Depressed Classes, when they prepared the Amildari Lists since 1952, in accordance with the order issued by the Government of India ;

(*b*) the reason for not giving effect to the said order during the recent selection of 15 Amildars ?

A.—Sri Kadidal MANJAPPA (Minister for Revenue and Public Works).—

(*a*) Yes.

(*b*) Does not arise in view of reply to clause (*a*).

ಶ್ರೀ ಜೆ. ನಾರಾಯಣಪ್ಪ.—15 ಜನ ಅಮಲ್ದಾರರನ್ನು ತಾವು ತೆಗೆದುಕೊಂಡಾಗ ಹರಿಜನರೊಬ್ಬರನ್ನು ಏಕೆ ತೆಗೆದುಕೊಳ್ಳಲಿಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಅವೊತ್ತೇ ಹೇಳಿದ ಹಾಗೆ, ಮುಂಚೆಯೇ ಒಟ್ಟು ಪಟ್ಟಿ ತಯಾರುಮಾಡುವಾಗ ಹರಿಜನರಿಗೆ ಮತ್ತು ಇತರ ನಿಮ್ನತರಗತಿಯವರಿಗೆ ಎಷ್ಟು ಸ್ಥಾನಗಳನ್ನು ಕೊಡಬೇಕೆಂಬುದನ್ನು ನಿರ್ಧಾರಮಾಡಿರುತ್ತೇವೆ. ಅದರಂತೆ ನೇಮಕ ಮಾಡಲಾಗುತ್ತಿದೆ. ಅಷ್ಟೇ ಹೊರತು, ಆ ಲಿಸ್ಟಿನಿಂದ ತೆಗೆದು ಪ್ರತಿಯೊಂದು ಸಾರಿಯೂ ಅಮಲ್ದಾರರನ್ನು ನೇಮಕಮಾಡುವಾಗ ಹರಿಜನರಿಗೆ ಪ್ರಾತಿನಿಧ್ಯ ಕೊಡುವುದಕ್ಕಾಗುವುದಿಲ್ಲ. ಸೀನಿಯಾರಿಟಿ ಪ್ರಕಾರ ಪಬ್ಲಿಕ್‌ಸರ್ವಿಸ್ ಕಮೀಷನ್ನಿನವರು ಪಟ್ಟಿಯನ್ನು ತಯಾರುಮಾಡಿರುತ್ತಾರೆ, ಅದರಂತೆ ನೇಮಕವಾಗುತ್ತದೆ.

ಶ್ರೀ ಜೆ. ನಾರಾಯಣಪ್ಪ.—ಶೇಕಡ 16 2/3ನಂತೆ ಕೊಟ್ಟಿದೆಯೆಂದು ಹೇಳಿದ್ದೀರಲ್ಲಾ, ಅದನ್ನನುಸರಿಸಿ ನೇಮಕ ಮಾಡುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—75 ಜನರ ಪಟ್ಟಿಯಲ್ಲಿ ಅದರಂತೆಯೇ ಮಾಡಿದೆ. ಅದರಲ್ಲಿ ಅವರಿಗೆ ಶೇಕಡ 18 ರಷ್ಟು ಪ್ರಾತಿನಿಧ್ಯ ಕೊಟ್ಟಿದೆ.

ಶ್ರೀ ಜೆ. ನಾರಾಯಣಪ್ಪ.—ಈಗ ನಮ್ಮಲ್ಲಿ ರೆವಿನ್ಯೂ, ಅಕೌಂಟ್ಸ್ ಮತ್ತು ಸಿವಿಲ್ ಪರೀಕ್ಷೆಗಳನ್ನು ಪಾಸುಮಾಡಿದವರು ಮತ್ತು ಸ್ಪೆಷಲ್ ಆಫೀಸರಾಗಿರುವವರು ಎಷ್ಟೋ ಜನರಿದ್ದಾರೆ. ಅವರಿಗೆಲ್ಲಾ ದಕ್ಷತೆಯಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅವರಲ್ಲಿ ಎಷ್ಟು ಜನ ಅಪ್ಲಿಕೇಷನ್ ಹಾಕಿದ್ದರೋ ಅವರಲ್ಲಿ ಒಬ್ಬರು ಬಿಡದೆ ಎಲ್ಲರನ್ನೂ ತೆಗೆದುಕೊಂಡಿದೆ.

Sigehalla Anecut.

Q.—253. Sri S. R. NAGAPPA SETTY (Shimoga).—

Will the Government be pleased to state :—

(*a*) the department now supervising over the Sigehalla Anecut in Shimoga Taluk ;

(*b*) whether water is being supplied to Gowdanakere from this Sigehalla ;

(*c*) (i) whether channels have been constructed from Gowdanakere and on to other tanks so as to supply water to them ;

(ii) if so, the number and the names of tanks for which water is being supplied and the extent of land brought under cultivation ;

(*d*) (i) the length of the Left and Right Bank Channels according to the original plan and estimate ;

(ii) the number of tanks for which water supply is assured and the names of villages from which mutchalikas have been obtained for providing water facilities ;

(*e*) the extent of new atchkat brought under cultivation as a result

(SRI S. R. NAGAPPA SETTY.)

of constructing the present Sigehalla Project and the names of villages which are enjoying this advantage ;

(*f*) the amount of contribution and the water rate fixed per acre ;

(*g*) whether the raiyats have been granted remission in this area during any year as a result of the tanks having been dried up due to non-rainfall ?

A.—**Sri Kadidal MANJAPPA** (Minister for Revenue and Public Works).—

(*a*) The Public Works Department.

(*b*) Yes.

(*c*) (i) Yes.

(ii) 15 tanks as noted below :—

Shimoga. Taluk.

1 Anesara tank
2 Kulavanthanakatte
3 Hosakurubanakatte
4 Doddakere
5 Chickere
6 Alanamaradakatte
7 Balasokere
8 Jagnikatte
9 Doddakere (Devakathikoppa Village.)
10 Halagaiyanakatte
11 Mallappadevarakatte
12 Doddakere (Somanakoppa Village).
13 Chikkatte
14 Thavaragatte
15 Balasokere

Total extent that can be supplied beyond Gowdanakere—684 acres 16 guntas.

(*d*) (i) Only one channel takes off from the right bank and its length according to the estimate should have been 8 1/4 miles.

(ii) Number of tanks : 24.

Names of villages from which mutchalikas are obtained :—

Shimoga Taluk.

Bilguni
Kachikoppa
Malalagoppa
Keddikoppa
Seddikoppa
Muddenakoppa
Siddalipura
Byaginakoppa
Somenakoppa
Bommanakatte
Kotegangur

(*c*) The project did not contemplate the irrigation of any fresh area.

(*f*) Contribution :—Rs. 25 and Rs. 50 per acre.

Water rate :—Rs. 2 per acre.

(*g*) No.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹಿಂದೆ ತಯಾರಾದ ಪ್ಲಾನು ಮತ್ತು ಎಸ್ಟಿಮೇಟಿನಂತೆ ಎಡಗಡೆ ಮತ್ತು ಬಲಗಡೆ ನಾಲೆ ಎರಡನ್ನೂ ಮಾಡಬೇಕಾಗಿತ್ತು. ಎಡಗಡೆಯ ನಾಲೆಯನ್ನೇಕೆ ಮಾಡಲಿಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಮೊದಲು ಇದ್ದದ್ದೇ ಒಂದು ನಾಲೆ ಎಂದು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಎಡಗಡೆಯ ನಾಲೆಯನ್ನು ಕೂಡ ಎಸ್ಟಿಮೇಟ್ ಮಾಡಿ ಪಬ್ಲಿಷ್ ಮಾಡಿದ್ದಂಥಾದ್ದಕ್ಕೆ ಸಂಬಂಧಪಟ್ಟ ಆಫೀಸ್ ರಿಕಾರ್ಡುಗಳನ್ನು ತೆಗೆದಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಫೈಲ್ ನನ್ನಲ್ಲಿದೆ ; ಹಾಗೇನೂ ಇಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಎಡಗಡೆಯ ನಾಲೆಗೆ ಎಸ್ಟಿಮೇಟ್ ಮಾಡಿಸಿ, ಮುಚ್ಚಳಿಕೆ ತೆಗೆದು ಕೊಂಡಿರುವುದಕ್ಕೆ ಸಂಬಂಧಪಟ್ಟ ರಿಕಾರ್ಡ್‌ಗಳನ್ನು ಆಫೀಸಿನಲ್ಲಿ ತೆಗೆದಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹಾಗೆ ಮಾಡಿದ್ದುಂಟೇ ಎಂದು ಅಲ್ಲಿಗೆ ಹೋಗಿ ವಿಚಾರಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ವಿಚಾರ ಮಾಡೋಣ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಪ್ರಾಜೆಕ್ಟನ್ನು P.W.D.ಗೆ ಸ್ಪೆಷಲ್ ಇರಿಗೇಷನ್ ಖಾತೆಯಿಂದ ಏಕೆ ವರ್ಗಮಾಡಲಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಸ್ಪೆಷಲ್ ಇರಿಗೇಷನ್ ಇಲಾಖೆಯ ಖಾತೆಯಲ್ಲದ್ದರೂ ಒಂದೇ, P.W.D. ಖಾತೆಯಲ್ಲದ್ದರೂ ಒಂದೇ ?

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಅವರೀಗ ಇದು ತಮ್ಮ ಆಡಳಿತಕ್ಕೆ ಬಂದಿಲ್ಲ, ಬಂದರೆ ಮಾಡುತ್ತೇವೆಂದು ಹೇಳುತ್ತಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—P.W.D. ಇಲಾಖೆಯಿಂದ ಮಾಡಬೇಕಾಗಿದ್ದುದಾದರೆ P.W.D.ಗೆ ಬರುತ್ತದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಗೌಡನಕೆರೆ ಕೋಡಿಯನ್ನು 1½ಅಡಿ ತಗ್ಗಿಸಿರುವುದು ನಿಜವೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಬೇಕು ; ನೆನಪಿಲ್ಲ. ಇನ್ನೊಂದು ಸಾರಿ ಶಿವಮೊಗ್ಗೆಗೆ ಹೋದಾಗ ಪರಿಶೀಲನೆ ಮಾಡಿ ಏನುಮಾಡಬೇಕೋ ಮಾಡೋಣ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಯಾವಾಗಲೂ ರೆವಿಷ್ ಕೊಟ್ಟಿಲ್ಲವೆಂದು ಹೇಳಿದ್ದೀರಿ. ಹಾಗಿದ್ದ ಮೇಲೆ water tax ಹಾಕುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—Assured water supply ಮಾಡುತ್ತೇವೆಂದು ಹೇಳಿ ಟ್ಯಾಕ್ಸ್ ಕೊಡಬೇಕೆಂದು ಹೇಳಿದೆ.

ಶ್ರೀ ಎಸ್ ಆರ್. ನಾಗಪ್ಪಶೆಟ್ಟಿ.—ಕೆರೆಯಕೋಡಿ ನಾಲೆಯನ್ನು ತಗ್ಗಿಸಿದಮೇಲೆ, ಆ ಕೆರಗೆ catchment area ಚೆನ್ನಾಗಿದ್ದರೂ ಯಾವಾಗಲೂ ನೀರು ಬಾರದಿರುವ ಸಂದರ್ಭದಲ್ಲಿ assured water supply ಮಾಡಿದೆಯೆಂದು ಹೇಳಿ ರೆಮಿಷ್ಷ್ ಕೊಡದಿರುವುದು ಸರಿಯೇ ?

ಶ್ರೀ ಕಡಿದಾಳ್ ಮಂಜಪ್ಪ.—ರೆಮಿಷ್ಷ್ ಕೊಡುವುದರಿಂದಲೇ assured water supply ಆಗುತ್ತದೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಗೌಡನ ಕೆರೆಗೆ ನೀರಿಗೆ ಹಳ್ಳದಿಂದ ಬರುವುದು 30-40 ಕ್ಯೂಸೆಕ್ಕುಗಳು. ಅಂಥದರಲ್ಲಿ ಈಗ ಅಲ್ಲಿಂದ ಸವಳಂಗದ ಕೆರೆಗೆ 3,000—4,000 ಕ್ಯೂಸೆಕ್ಕುಗಳು ಹರಿದು ಹೋಗುತ್ತಿದೆ. ಹೀಗಿರುವಾಗ assured water supply ಇದೆಯೆಂದು ಹೇಳಿ ಟ್ಯಾಕ್ಸ್ ಹಾಕುವುದು ಸರಿಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರಯೋಜನವಾಗುತ್ತದೆಂದು ಮನದಟ್ಟಾಗಿಯೇ ಮುಚ್ಚಳಿಕೆ ಬರೆದು ಕೊಟ್ಟಿದ್ದಾರೆ. ಅದರಂತೆ ಟ್ಯಾಕ್ಸ್ ಹಾಕುತ್ತಿದ್ದೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈಗ ಗೌಡನ ಕೆರೆಯಿಂದ ಮುಂದಕ್ಕೆ ಹೋಗುವ ನಾಲೆಯಲ್ಲಿ ಎಲ್ಲಿಯವರೆಗೆ ನೀರು ಕೊಡುತ್ತೀರೋ ಅಲ್ಲಿಯವರೆಗೆ ಮಾತ್ರ water rate ವಿಧಿಸುವುದು ನ್ಯಾಯವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಗೌಡನ ಕೆರೆಯ ನಂತರ ಅದರ ಕೆಳಗೂ ಕೆರೆಗಳಿವೆ. ಆ ಕೆರೆಗಳಿಗೆಲ್ಲಾ assured water supply ಇದೆಯೆಂದು ಹೇಳುತ್ತಿದ್ದಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಪಾಸ್ತವವಾಗಿ ಅನೇಕರಿಗೆ ಅನ್ಯಾಯವಾಗುತ್ತಿರುವುದನ್ನು ವಿಚಾರ ಮಾಡಿಸಿ ಮತ್ತು ಈ ಪ್ರಾಜೆಕ್ಟಿನಲ್ಲಿ ಯಾರು ಯಾರು ಕೆಲಸಮಾಡಿದ್ದಾರೋ ಅವರು ಎಷ್ಟರಮಟ್ಟಿಗೆ ದುರ್ವಿನಿಯೋಗ ಮಾಡಿದ್ದಾರೆಂಬುದನ್ನು ಎಕ್ಸ್‌ಕ್ಯೈರಿ ಹಣವನ್ನು ಮಾಡಿಸಿ ರೈತರಿಗೆ ಅನುಕೂಲಮಾಡಿಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—1945ನೆಯ ಇಸವಿಯಲ್ಲಿ work ಪ್ರಾರಂಭವಾಗಿ ಮುಗಿದಿದೆ. ಈಗ ಎಕ್ಸ್‌ಕ್ಯೈರಿ ಮಾಡುವುದರಿಂದ ಏನೂ ಫಲತಾಂಶವಿರುವುದಿಲ್ಲ. ರೈತರಿಗೆ ತೊಂದರೆಯಾಗುತ್ತಿದ್ದರೆ ವಿಚಾರಮಾಡೋಣ. ಇನ್ನೊಂದುಸಾರಿ ಶಿವಮೊಗ್ಗಕ್ಕೆ ಹೋದಾಗ ನೋಡೋಣ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ತಮ್ಮ original plan ಪ್ರಕಾರ ಎಡಗಡೆ ನಾಲೆಯನ್ನೂ ಮಾಡಬೇಕೆಂದಿದೆ. ಅದನ್ನೂ ಪರಿಶೀಲನೆ ಮಾಡುತ್ತೀರಾ ?

(ಉತ್ತರವಿಲ್ಲ.)

Road works at Nelahalu and Champehalli.

(Compensation for lands acquired.)

Q.—471. Sri B. C. NANJUNDIAH (Kora).—

Will the Government be pleased to tate :—

(*a*) when the work of the roads of Nelahalu, Tumkur taluk, and Champehalli of Koratagere taluk was commenced ;

(*b*) the department which formed this road ;

(*c*) whether the acquisition proceedings in respect of lands in this connection have been completed ;

(*d*) if so, the amount granted for the acquisition and the department which paid this amount ;

(*e*) if the acquisition proceedings are not completed, the reason therefor ?

A.—Sri T. CHANNIAH (Minister for Public Health and Local Self-Government).—

(*a*) In 1933-34.

(*b*) Public Works Department.

(*c*) The acquisition has been sanctioned.

(*d*) About Rs. 4,800 has been sanctioned, to be paid by the Local Self-Government Department.

(*e*) Does not arise ; *vide* reply to clause (*c*).

ಶ್ರೀ ಬಿ. ಸಿ. ನಂಜುಂಡಯ್ಯ.—Acquisition has been sanctioned ಎಂದು ಹೇಳಿದ್ದೀರಿ. ಯಾವಾಗ sanction ಆಯಿತು ?

ಶ್ರೀ ಟಿ. ಚನ್ನಯ್ಯ.—23ನೇ ಮಾರ್ಚ್ 1955ರಲ್ಲಿ.

ಶ್ರೀ ಬಿ. ಸಿ. ನಂಜುಂಡಯ್ಯ.—ಈ interpellation ಕಳುಹಿಸಿದಮೇಲೆ sanction ಆಯಿತೆಂದು ತಿಳಿದುಕೊಳ್ಳೋಣವೇ ?

ಶ್ರೀ ಟಿ. ಚನ್ನಯ್ಯ.—ಹಾಗೆಯೇ ತಿಳಿದುಕೊಳ್ಳಬಹುದು.

ಶ್ರೀ ಬಿ. ಸಿ. ನಂಜುಂಡಯ್ಯ.—ಈ ರಸ್ತೆ form ಆಗಿ 25 ವರ್ಷವಾಯಿತು. ಹಾಗಿದ್ದರೂ ಆ ಜಮೀನಿನ ಮೇಲೆ ಕಾಂಪೆನ್‌ಸೇಷ್ಷ್ ಕೊಡುವುದು ಹೋಗಲಿ, ಕಂದಾಯವನ್ನು 25 ವರ್ಷದಿಂದ ಹಾಕಿ ವಸೂಲು ಮಾಡುತ್ತಿದ್ದಾರೆಂಬುದು ಗೊತ್ತಿದೆಯೇ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಬಿ. ಸಿ. ನಂಜುಂಡಯ್ಯ.—ಈ ಕೆಲಸವನ್ನು Public Works Departmentನವರು ಮಾಡುತ್ತಾರೆಂದು ಹೇಳಿದ್ದೀರಿ ; (ಡಿ) ಪ್ರಶ್ನೆಗೆ ಉತ್ತರದಲ್ಲಿ "About Rs. 4,800 has be sanctioned, to be paid by the Local Self-Government Department" ಎಂದು ಹೇಳಿದ್ದೀರಿ. Local Self-Government ನಿಂದ ಕೊಡುವುದಾದರೆ ಅವರು ಯಾವ ಹೆಡ್‌ನಿಂದ ಕೊಡುತ್ತಾರೆ ?

Sri T. CHANNIAH.—From Land Revenue assignments.